# ನವಿಲುಗನ್ನಡಿ

- ಜನವರಿ, 2021ರ ಸಂಚಿಕೆಯ 'ನಾಂದಿಪದ' ಅರ್ಥಪೂರ್ಣ. ಇಂದು ಕನ್ನಡದಲ್ಲಿರುವ ಕೆಲವೇ ದೊಡ್ಡ ಪ್ರತಿಭೆಗಳು ತಮ್ಮ ಸೀಮಿತ ಅನುಭವವನ್ನು ಮತ್ತೆಮತ್ತೆ ಮಂಡಿಸುತ್ತಿವೆ. ಆದರಿಂದಾಗಿ ಕನ್ನಡ ಸಾಹಿತ್ಯದ ಚಲನಶೀಲತೆ ಕುಂಠಿತಗೊಂಡಿರುವ ಕಟುಸತ್ಯವನ್ನೇ ಇಲ್ಲಿ ಹೇಳಲಾಗಿದೆ.

**ಎಸ್.ಬಿ. ರಂಗನಾಥ್, ದಾವಣಗೆರೆ**

- ಈ ಸಂಚಿಕೆಯ ಪ್ರತಿ ಕತೆಯೂ ಸೊಗಸಾಗಿದೆ. ವಸುಮತಿ ಉಡುಪ ಅವರ 'ನಂಜಾಗಿ ಕಾಡಿತ್ತು ಮಾತು', ಪ್ರೇಮಕುಮಾರ್ ಹರಿಯಬ್ಬೆ ಅವರ 'ದೇವರ ಕೆರೆ', ಮಧುರಾ ಕರ್ಣಮ್ ಅವರ 'ಉಡಿಯ ಕೆಂಡ' ಮನಸೆಳೆದ ಕತೆಗಳು.

**ಸಾವಿತ್ರಿ ಶ್ಯಾನಭಾಗ, ಕುಂದಾಪುರ**


- ದಶಕಗಳಿಂದಲೂ 'ಮಯೂರ'ದ ಓದುಗನಾಗಿದ್ದೇನೆ. ಚೆಂದದ ಕತೆಗಳು ಮನರಂಜಿಸುತ್ತಲೇ ಇವೆ. ಈ ಸಂಚಿಕೆಯ ಕತೆ 'ದೇವರ ಕೆರೆ' ಓದಿಸಿಕೊಂಡಿತು. ಕೆರೆಯಲ್ಲಿ ಬಿದ್ದ ಹೆಣ ಉಂಟು ಮಾಡಿದ ತಲ್ಲಣಗಳು ಕತೆಯಲ್ಲಿ ಕುತೂಹಲಕಾರಿಯಾಗಿದ್ದವು. ಭರಪೂರ ಮನರಂಜನೆ ನೀಡುವ ಪತ್ರಿಕೆಯ ಪಯಣ ನಿರಂತರವಾಗಿರಲಿ.

**ಎಸ್. ವೆಂಕಟೇಶ್, ಬೆಂಗಳೂರು**

- ಹಿ.ಚಿ. ಬೋರಲಿಂಗಯ್ಯ ಅವರು ಸಂಗ್ರಹಿಸಿರುವ ಜನಪದ ಕತೆ 'ಇರುವೆಯ ಸಾಹಸ'ದಲ್ಲಿ ಪ್ರತಿಯೊಬ್ಬರ ಜೀವನಕ್ಕೆ ಅಗತ್ಯವಾದ ಸಂದೇಶವಿದೆ.

**ರಾಜೀವ್ ಎನ್. ಮಾಗಲ್, ಸಕಲೇಶಪುರ**

- 'ಉಡಿಯ ಕೆಂಡ' ಕತೆಯಲ್ಲಿ ಪದ್ಮಕ್ಕನ ಬಸಿರಿನ ವಿಷಯ ಬಯಲಾದ ಸಂದರ್ಭವನ್ನು ಓದುವಾಗ ಎಸ್.ಎಲ್. ಭೈರಪ್ಪನವರ ಕಾದಂಬರಿ 'ವಂಶವೃಕ್ಷ' ನೆನಪಿಗೆ ಬಂತು. ಭಾಗಕ್ಕನನ್ನು ಸುಡುತ್ತಿದ್ದ 'ಉಡಿಯ ಕೆಂಡ' ಪದ್ಮಳ ಮಡಿಯಲ್ಲಿ ತಣ್ಣಗಾಗುತ್ತದೆ. ಕತೆಯ ವಸ್ತು ವಿಭಿನ್ನ ಹಾಗೂ ವಿಸ್ಮಯಕರ.




**ಚಂದ್ರೇಗೌಡ ಎಂ.ಡಿ.,**
**ಸಿ.ಆರ್. ಶ್ರೀನಿವಾಸ, ಬೆಂಗಳೂರು**

- ಕಲೀಮ್ ಉಲ್ಲಾ ಅವರ ಪ್ರಬಂಧ 'ಟೈಲರನೊಬ್ಬನ ಪ್ರೇಮ' ಹಾಸ್ಯದ ಜೊತೆಗೆ ಹದಿಹರೆಯದ ಯುವಕರ ಕನಸು, ಪಡಿಪಾಟಲನ್ನು ಸೊಗಸಾಗಿ ತೆರೆದಿಟ್ಟಿದೆ.

**ಎಂ.ಜಿ. ರಂಗಸ್ವಾಮಿ, ಹಿರಿಯೂರು**

- ಈ ಸಂಚಿಕೆಯ ಎಲ್ಲಾ ಕವಿತೆಗಳು ಸೊಗಸಾಗಿವೆ. ಅದರಲ್ಲೂ ಎಚ್. ಡುಂಡಿರಾಜ್ ಅವರ ಚಿಕ್ಕ–ಚೊಕ್ಕ ಕವಿತೆಗಳು ಗಮನ ಸೆಳೆದವು.

**ಚಿದಾನಂದ ಎಂ., ವಿಜಯಪುರ**

- ವಾಸುದೇವ ನಾಡಿಗ್ ಅವರ ಕವಿತೆ 'ಪಗಡೆ' ಅಧ್ಯಾತ್ಮದ ಪಾತಳಿಯ ಮೇಲೆ ಮನುಷ್ಯ ಬದುಕಿಗೆ ಸಂಬಂಧಿಸಿದ ಕ್ರಿಯೆಗಳನ್ನು ಅರ್ಥಪೂರ್ಣವಾಗಿ ವಿವರಿಸುತ್ತದೆ.

**ಕಲ್ಲೇಶ್ ಕುಂಬಾರ್, ಹಾರೂಗೇರಿ**